# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯವರ ಘನ ಅಧ್ಯಕ್ಷತೆಯಲ್ಲಿ ದಿ:05.02.2022 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀಮತಿ.ಸಂಗೀತಾ.ಆರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ.ಅಣ್ಣಪ್ಪ | TI |
| 4. | ಶ್ರೀ.ದೊಡ್ಡವಿರಪ್ಪ. | AE BWSSB |
| 5. | ಶ್ರೀ.ಕೆ.ಎಲ್.ಉಮೇಶ್ | ಕೆ.ಪ |
| 6. | ಶ್ರೀಮತಿ.ಸುಮಿತ್ರ | JE BWSSB |
| 7. | ಶ್ರೀ.ಪುಟ್ಟ ಸ್ವಾಮಿ ಪೋಲಿಸ್ ಇಲಾಖೆ | ASI |
| 8. | ಶ್ರೀ.ಬಿ.ಎನ್ ಶಿವಕುಮಾರ್ | Revenue |
| 9. | ಶ್ರೀಮತಿ. ನಂದಿನಿ | Tailoring instructor |
| 10. | ಶ್ರೀಮತಿ. ಉಮಾ | ಅಂಗನವಾಡಿ ಕಾರ್ಯಕಾರ್ತೆ |

ವಾರ್ಡಿನ ಕಾರ್ಯದರ್ಶಿಗಳ ಪರವಾಗಿ ಶ್ರೀ.ಕೆ.ಎಲ್.ಉಮೇಶ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. 1ನೇ ಮುಖ್ಯರಸ್ತೆ ಅನಂತನಗರದ 7ನೇ ಕ್ರಾಸ್ ನಿವಾಸಿಗಳು ದೂರವಾಣಿ ಮೂಲಕ ಕರೆ ಮಾಡಿ Pipeline ಅಳವಡಿಸಲು ತೆಗೆದಿದ್ದ Trunch ನ್ನು ಸರಿಯಾಗಿ ಮುಚ್ಚಿರುವುದಿಲ್ಲ Concrete ಹಾಕಿ ಮುಚ್ಚಲು ಸರಿಮಾಡಿ ಕೊಡಲು ಮನವಿ ಮಾಡಿದರು. ರಸ್ತೆಗೆ Concrete ಹಾಕುವ ಹೊಸಕಾಮಗಾರಿ ಪ್ರಾರಂಭವಾಗುವುದಾಗಿ ತಿಳಿಸಿ ಸರಿಮಾಡಿಕೊಡುವುದಾಗಿ ಸಭೆಗೆ ಕಾರ್ಯದರ್ಶಿ ರವರು ತಿಳಿಸಿದರು.
2. ಬಾಪೂಜಿನಗರದ 4ನೇ ಕ್ರಾಸ್ ನಲ್ಲಿ 1 ಮ್ಯಾನ ಹೊಲ್ ಒಡೆದಿದ್ದು, ಅದನ್ನು ಸರಿ ಪಡಿಸಿಕೊಡಬೇಕೆಂದು ಶ್ರೀ.ಯಶವಂತ್ ರಾವ್ ರವರು ಹಾಗೂ ಶ್ರೀ.ನಾರಾಯಣ್ ರಾವ್ ರವರು ದೂರವಾಣಿ ಮೂಲಕ ಮನವಿ ಮಾಡಿ ಅ ದೂರನ್ನು ಶ್ರೀ. ದೊಡ್ಡವಿರಪ್ಪ ರವರು ಸೋಮವಾರದಿಂದ, ಕಾಮಗಾರಿ ಪ್ರಾರಂಭಿಸಿ ಸರಿಪಡಿಸುವುದಾಗಿ ತಿಳಿಸಿದರು.
3. ಕಸದ ಆಟೋಗಳನ್ನು ಮೈದಾನದಲ್ಲಿ ನಿಲ್ಲಿಸಿ ಅಲ್ಲೇಯೇ ಸಾರ್ವಜನಿಕರು ಕಸ ಹಾಕಿ ಅಲ್ಲಿಯೇ ಕಸ ಶೇಖರವಾಗಿ ನೊಣಗಳು ಇತ್ಯಾದಿಗಳಿಂದ Hospital ಗೆ ಬರುವ ಜನಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾವಗುತ್ತಿದ್ದು ಬೇರೆಡೇಗೆ ಸ್ಥಳಾಂತರಿಸುವಂತೆ ಸಾರ್ವಜನಿಕರು ಕೋರಿ ನೋಡಲ್ ಅಧಿಕಾರಿ ರವರಿಗೆ ದೂರವಾಣಿ ಮೂಲಕ ತಿಳಿಸಲಾಗಿ ಅವರು SWD AEE ಶ್ರೀ.ಬಾಲಗಂಗಾದರರ ರವರಿಗೆ ದೂರವಾಣಿ ಮೂಲಕ ಸ್ಥಳಾಂತರಿಸುವಂತೆ ತಿಳಿಸಿರುತ್ತಾರೆ.
4. ಈ ಪಾಕ್ಷಿಕದಲ್ಲಿ ರೂ: 28.00 ಲಕ್ಷಗಳಷ್ಟು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ತೆರಿಗೆ ಪರಿವೀಕ್ಷಕರು ಸಭೆಗೆ ತಿಳಿಸಿದರು.
5. ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತಿ ದಿನ ಕೋವಿಡ್ ಲಸಿಕೆಯನ್ನು 1st Dose, 2nd Dose ಹಾಗೂ Booster Dose ನೀಡಲಾಗುತ್ತಿದೆಂದು ಡಾ॥ ಮಂಜುನಾಥ್ ರವರು ದೂರವಾಣಿ ಮೂಲಕ ಸಭೆಗೆ ತಿಳಿಸಿದರು.

6. Silt & Tractor ರವರು Fish Bridge, A Street, ಗಳಲ್ಲಿ ದೂರು ಇದ್ದ Silt ನ್ನು ತೆರವುಗೊಳಿಸಿರುತ್ತಾರೆ.
7. Concrete ರಸ್ತೆ ಕಾಮಗಾರಿಗಳು, Pothole ಕಾಮಗಾರಿಗಳು ಪ್ರಗತಿಯಲ್ಲಿ ಇರುತ್ತದೆ.
8. ಸಾರ್ವಜನಿಕರಿಂದ ಕೆಳಕಂಡ ಸ್ಥಳಗಳಲ್ಲಿ, ವಿದ್ಯುತ್ ದೀಪಗಳು ಬರುತ್ತಿಲ್ಲವೆಂದು ದೂರವಾಣಿ ಮೂಲಕ ಕಾರ್ಯ ನಿರೀಕ್ಷರಿಗೆ ತಿಳಿಸಿದರು Street Light Agency ಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ. ಅಯ್ಯಪ್ಪ ಸ್ವಾಮಿ ದೇವಸ್ಥದ ಬಳಿ ಅನಂತ ನಗರ 8ನೇ ಕ್ರಾಸ್, 9ನೇ ಕ್ರಾಸ್ ಬಳಿ.

ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ-ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 05.02.2022.

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134